ಅಸಲು ದಾವಾ ಸಂಖ್ಯೆ - 184/2015
ಡಿಡಬ್ಲ್ಯೂ - 02
ದಿನಾಂಕ: 24-07-2026
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಸಿ.ಬಿ.ಪಿ. ವಕೀಲರಿಂದ:

ದಾವಾ ಆಸ್ತಿ ನಂ. ಹೇಳಲು ಆಗುತ್ತದೆಯೆ ಎಂದರೆ 546/2 ಇರುತ್ತದೆ. ದಾವಾ ಆಸ್ತಿ ವಾದಿಯರಿಗೆ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಯ ಪೂರ್ವಕ್ಕೆ ಯಾರ ಆಸ್ತಿ ಇದೆ ಎಂದರೆ ಲೋಹಾರ್ ಅವರ ಆಸ್ತಿ, ದಕ್ಷಿಣಕ್ಕೆ ಸರ್ಕಾರಿ ಕಂದಕ, ಉತ್ತರಕ್ಕೆ ಪಾಳಾ ಬಾದಾಮಿ ರೋಡ್, ಪಶ್ಚಿಮಕ್ಕೆ ಪುರಸಭೆ ಜಾಗ ಇದೆ. ನಿಮ್ಮ ವಯಸ್ಸು ಎಷ್ಟು ಎಂದರೆ 39 ವರ್ಷ. ದಾವಾ ಆಸ್ತಿಯ ಪೂರ್ವಕ್ಕೆ ಉಳಿದ ಆಸ್ತಿ ಎಂದು ನುಡಿದಿದ್ದು ಸದರಿ ಆಸ್ತಿಯು ವಾದಿಯರಿಗೆ ಹೇಗೆ ಬಂದಿತು ಎಂದರೆ ಅದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಅಳತೆ ಎಷ್ಟು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರವನ್ನು ಬರೆಯಲು ಯಾರು ಮಾಹಿತಿ ನೀಡಿದರು ಎಂದರೆ ನಾನೇ ಮಾಹಿತಿ ನೀಡಿರುತ್ತೇನೆ. 1994 ರಲ್ಲಿ ಸರ್ಕಾರದವರು ದಾವಾ ಆಸ್ತಿಯನ್ನು ವಾದಿಗೆ ಮಂಜೂರು ಮಾಡಿದ್ದು, ಅದೇ ರೀತಿಯಾಗಿ ವಾದಿಗೆ ಮಂಜೂರು ಮಾಡಿದ ಆಸ್ತಿಯ ಪೂರ್ವ ದಿಕ್ಕಿನ ಕಡೆಗೆ ಇರುವಆಸ್ತಿಯನ್ನು ಪ್ರತಿವಾದಿಯರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

ಅಸಲು ದಾವಾ ಸಂಖ್ಯೆ 184/2015 ರ ಸಂಪೂರ್ಣ ಮಾಹಿತಿ ನಿಮಗೆ ಇದೆಯೇ ಎಂದರೆ ಇದೆ. ವಾದಿಯರಿಗೆ ಸರ್ಕಾರದವರು 1994 ರಲ್ಲಿ ಪೂರ್ವ ಪಶ್ಚಿಮ 115 ಫೂಟ್ ಉತ್ತರ ದಕ್ಷಿಣ 110 ಫೂಟ್ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸುಳ್ಳು. ವಾದಿಯು ದಾವಾ ಆಸ್ತಿಯಲ್ಲಿ ಶೆಡ್ ಹಾಕಿದ್ದರಿಂದ 2009 ರಲ್ಲಿ ಪುರಸಭೆ ಸವಣೂರು ಇವರು ಅದನ್ನು ತೆಗೆದು ಹಾಕಿದ್ದರಿಂದ ವಾದಿಯು 2009 ರಲ್ಲಿ ದಾವೆ ಮಾಡಿದ್ದರು ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಲು ನ್ಯಾಯಾಲಯದಿಂದ ಏನಾದರೂ ಸಮನ್ಸ ಬಂದಿತ್ತಾ ಎಂದರೆ ಇಲ್ಲ.

ಪ್ರತಿವಾದಿಯರು ನಿಮಗೆ ಏನಾಗಬೇಕು ಎಂದರೆ ಪರಿಚಯ ಇರುತ್ತದೆ. ಪ್ರತಿವಾದಿಯರು ಕಲ್ಮೂಠ ಇವರಿಂದ ಆಸ್ತಿಯನ್ನು ಖರೀದಿಸಿದ್ದು ಎಂದು ನುಡಿದಿದ್ದು ಸದರಿ ಆಸ್ತಿಯು ಕಲ್ಮೂಠ ಇವರಿಗೆ ಹೇಗೆ ಬಂದಿತು ಎಂದು ನಿಮಗೆ ಗೊತ್ತ ಎಂದರೆ ಇಲ್ಲ. ಕಲ್ಮೂಠ ಇವರಿಗೆ ಯಾವುದೇ ಆಸ್ತಿ ಇಲ್ಲದೇ ಇದ್ದರೂ ಅವರು ಮತ್ತು ಪ್ರತಿವಾದಿಯರು ಮಿಲಾಪಿಯಾಗಿ ಸುಳ್ಳು ಖರೀದಿ ಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲ. ಈ ಹಿಂದೆ ಇದೇ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇದ್ದ

ದಾವೆ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಇಲ್ಲ. ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು

DW2 is present fully cross examined by Sri CBP advocate.

Sri VBT advocate prays time for further defendant side evidence. Call on 27-07-2026.

CJ and JMFC, Savanur